ಇ) ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 31.7.2003ರ 37ನೇ ಪಟ್ಟಿಯ 71 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪೈಕಿ 64 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂಧ-1)

ಅಧ್ಯಕ್ಷರು : ಮಂಡಿಸಲಾಯಿತು.

2. ಚುನಾವಣಾ ಪ್ರಸ್ತಾಪ

ವಿಷಯ : ವಿಧಾನ ಸಭೆಯ ಸದಸ್ಯರನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಸೆನೆಟ್‌ಗೆ ಸದಸ್ಯರುಗಳನ್ನು ನೇಮಿಸುವುದರ ಬಗ್ಗೆ ಪ್ರಸ್ತಾವನೆ ಮಂಡನೆ

ಶೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 15ನೇ ಜುಲೈ 2003 ಕರ್ನಾಟಕ ವಿಧಾನ ಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಹಾಗೂ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಸೆನೆಟ್ ಚುನಾವಣೆಯ ಪ್ರಸ್ತಾಪವನ್ನು ಮಂಡಿಸಿದ್ದು ಚುನಾವಣೆಯ ಕಾರ್ಯಕ್ರಮದ ವೇಳಾಪಟ್ಟಿಯನ್ನು ಪ್ರಕಟಿಸಲಾಗುತ್ತಿದೆ. ಈ ಬಗ್ಗೆ ಕುರಿತು ವಿವಿಧ ಪಕ್ಷಗಳ ಸಚೇತಕರು ನೀಡಿರುವ ಒಡಂಬಡಿಕೆಯ ರಿತ್ಯ ಮಾನ್ಯ ವಿಧಾನಸಭೆಯ ಸದಸ್ಯರನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ರಾಜೀವ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಸೆನೆಟ್‌ಗೆ ಮಾನ್ಯ ಸದಸ್ಯರುಗಳನ್ನು ನೇಮಿಸಲು ಮಾನ್ಯ ವಿಧಾನಸಭೆಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ಈ ಸದನವು ನೀಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾವ

ವಿಷಯ : ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಕಾವೇರಿ ರಿವರ್ ಅಥಾರಿಟಿ ಮಾನಿಟರಿಂಗ್ ಕಮಿಟಿ ಮೀಟಿಂಗನ್ನು ಕರೆಯುತ್ತೇವೆಂದು ಹೇಳಿರುವುದರ ಬಗ್ಗೆ

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆಯನ್ನು ಕೇಳುವುದು ಇದೆ ಸ್ವಾಮಿ, ನಾನು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ. ನಿನ್ನೆ ದಿವಸ ಕೇಂದ್ರ ಸರ್ಕಾರದವರು ಲೋಕಸಭೆಯಲ್ಲಿ ಕಾವೇರಿ ರಿವರ್ ಅಥಾರಿಟಿ ಮಾನಿಟರಿಂಗ್ ಕಮಿಟಿ ಮೀಟಿಂಗ್‌ನ್ನು ಕರೆಯುತ್ತೇವೆಂದು ಹೇಳಿರುತ್ತಾರೆ. ಮಾನ್ಯ ಚಂದ್ರೇಗೌಡರೆ, ತಾವು ತಮ್ಮ ಗಮನವನ್ನು ಈ ಕಡೆ ಸ್ವಲ್ಪ ಹರಿಸಬೇಕು. ನಿಮಗೆ ಗೊತ್ತಿರುವಂತೆ ಕಾವೇರಿಯಲ್ಲಿ ನಮ್ಮ ಕನ್ನಂಬಾಡಿ ಕಟ್ಟೆಯಲ್ಲಿರಬಹುದು. ಅಥವಾ ಕಬನಿಯಲ್ಲಿರಬಹುದು ಸಾಕಷ್ಟು ನೀರು ಇಲ್ಲದೇ ಇರತಕ್ಕಂಥದ್ದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರವಾಗಿದೆ. ವಿಶೇಷವಾಗಿ ಮಂಡ್ಯ ರೈತರು ಈ ದೃಷ್ಟಿಯಲ್ಲಿ ಬಹಳ ದೊಡ್ಡ ಹೋರಾಟವನ್ನು ಮಾಡುತ್ತಿದ್ದಾರೆ. ನಮ್ಮ ರಾಜ್ಯ ಸಭಾ ಸದಸ್ಯರೊಬ್ಬರು ಈ ಒಂದು ವಿಚಾರವನ್ನು ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ಪ್ರತಿದಿವಸ ನಾವು ಕಾವೇರಿಯಿಂದ ತಮಿಳುನಾಡಿಗೆ ನೀರನ್ನು ಬಿಡುತ್ತಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಪ್ರತಿದಿವಸ 5000 ಕ್ಯೂಸೆಕ್ಸ್ ನೀರನ್ನು ಬಿಡುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ರೆಕಾರ್ಡ್ ಸ್ಟೇಟ್ ಆಗಿ ಇರಬೇಕಾಗುತ್ತದೆ. ರೈತರು ಈಗ ಬೆಳೆಗಳನ್ನು

ಹಾಕಬಹುದಾ? ಆ ನೀರನ್ನು ಕುಡಿಯುವುದಕ್ಕೆ ಉಪಯೋಗಿಸಿಕೊಳ್ಳುತ್ತೀರಾ ಅಥವಾ ಬೆಳೆಗಳಿಗೆ ಉಪಯೋಗಿಸಿಕೊಳ್ಳುತ್ತೀರಾ? ನೀರು ಬಂದಿದೆಯಾ, ನೀರಿನ ಪೊಸಿಷನ್ ಏನು? ಒಂದು ಕಡೆ ಅವರು ನೀರು ಬಿಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅವರು ತಕ್ಷಣದಲ್ಲಿ ಮಾನಿಟರಿಂಗ್ ಕಮಿಟಿ ಮಿಟಿಂಗ್‌ನ್ನು ಕರೆಯುತ್ತೇವೆಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರದ ನಿಲುವು ಏನು ಎನ್ನುವುದು ನಮಗೆ ಗೊತ್ತಾಗಬೇಕು. ಏಕೆಂದರೆ ಕನ್ನಂಬಾಡಿಕಟ್ಟೆಯಲ್ಲಿ ಎಷ್ಟು ನೀರು ಇದೆ. ನಮ್ಮ ರೈತರಿಗೆ ಈಗ ಬೆಳೆಗಳನ್ನು ಹಾಕಬಾರದೆಂದು ಸೂಚನೆಯನ್ನು ಕೊಟ್ಟಿದ್ದರು. ಅದಕ್ಕೆ ನಮ್ಮ ರೈತರು ಬದ್ದರಾಗಿದ್ದಾರೆ ಪಾಪ, ಅನೇಕ ಕಡೆಗಳಲ್ಲಿ ಹಾಕಿರುವುದಿಲ್ಲ. ಆದರೂ ಸಹಿತ ಇವತ್ತು ಪರಿಸ್ಥಿತಿ ಬಹಳ ಗಂಭೀರವಾಗಿದೆ. ಆದರೆ ನಮ್ಮ ರಾಜ್ಯಸಭಾ ಸದಸ್ಯರಿಗೆ ಮಾಹಿತಿಯನ್ನು ಕೊಟ್ಟವರು ಯಾರು? ಅವರು ಮಂತ್ರಿಗಳು ಉತ್ತರವನ್ನು ಕೊಟ್ಟ ಹಾಗೆ ಕೊಟ್ಟಿದ್ದಾರೆ. ನಾವು ಪ್ರತಿದಿವಸ 5000 ಕ್ಯೂಸೆಕ್ಸ್ ನೀರನ್ನು ಬಿಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನೂ ಸಹ ಹೇಳಿದ್ದಾರೆ. ತಮಿಳುನಾಡಿನವರು ನಾವು ತಪ್ಪಿತಸ್ಥಸ್ಥಾನದಲ್ಲಿದ್ದೇವೆ ತೋರಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಂತಹ ಸನ್ನಿವೇಶದಲ್ಲಿ ಸರ್ಕಾರದ ನಿಲುವು ಏನು ಈ ವಿಚಾರದಲ್ಲಿ, ನೀರು ಎಷ್ಟು ಬಂದಿದೆ. ಸಂಕಷ್ಟದ ಪರಿಸ್ಥಿತಿಯಲ್ಲಿ ನಾವಿರುವಾಗ ಆ ಮೀಟಿಂಗ್‌ನ್ನು ಕರೆದಿರತಕ್ಕಂಥ ಉದ್ದೇಶ ಏನು? ಇದರ ಬಗ್ಗೆ ತಾವೊಂದು ಸರ್ವಪಕ್ಷ ಸಭೆಯನ್ನು ಕರೆದು, ಇಂತಹ ಎಲ್ಲಾ ಸಂದರ್ಭದಲ್ಲಿ ನೀವು ಕರೆದಿರುತ್ತೀರಿ. ನಮ್ಮ ಗಮನಕ್ಕೂ ಇಂತಹ ವಿಚಾರ ತರುವುದಕ್ಕೆ ಸಾಧ್ಯವೆ? ಇದರ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದನ್ನು ನಾನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾದಂಥ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಇದನ್ನು ಮಾನ್ಯ ನೀರಾವರಿ ಸಚಿವರ ಗಮನಕ್ಕೆ ತಂದು ಇದರ ಬಗ್ಗೆ ಸರ್ಕಾರದ ಪ್ರತಿಕ್ರಿಯೆ ಏನು ಎನ್ನುವುದರ ಬಗ್ಗೆ ನಾಳೆ ದಿವಸ ಉತ್ತರವನ್ನು ಕೊಡಿಸುತ್ತೇನೆ.

ಆ) ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ನಡೆದ ಅಪಘಾತದಲ್ಲಿ ಸುಮಾರು 7 ಜನ ಕಾರ್ಮಿಕರು ಸಾವಿಗೀಡಾಗಿದ್ದು ಏಳೆಂಟು ಜನ ಆಸ್ಪತ್ರೆಗೆ ದಾಖಲಾಗಿರುವ ಬಗ್ಗೆ

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಕಳೆದ ರಾತ್ರಿ ಮೂರುವರೆ ಗಂಟೆಗೆ ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಬಹಳ ದೊಡ್ಡ ಅವಘಡ ನಡೆದು ಸುಮಾರು 7 ಜನ ಕಾರ್ಮಿಕರು ಸುಟ್ಟು ಕರಕಲಾಗಿ ಹೋಗಿದ್ದಾರೆ. ಸುಮಾರು 8–10 ಜನ ಕಾರ್ಮಿಕರು ಈಗಾಗಲೇ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಾ ಸಾವು ಬದುಕಿನ ನಡುವೆ ಹೋರಾಟವನ್ನು ಮಾಡುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಇದೊಂದು ಬಹಳ ದೊಡ್ಡ ಅವಘಡ, ನಮ್ಮ ಕಾರ್ಮಿಕರ ವರ್ಗ ಅದೊಂದು ಅನ್ನದ ಕ್ಷೇತ್ರವೆಂದು ಭಾವನೆಮಾಡಿಕೊಂಡು ಅಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಅಲ್ಲಿರುವಂಥವರ ಅಜಾಗರೂಕತೆಯಿಂದಾಗಿ ಕಾರ್ಮಿಕರ ಪಾಲಿಗೆ ಸಾವಿನ ಮನೆಯಾಗಿದೆ. ದ್ರವರೂಪದಲ್ಲಿ ಬರತಕ್ಕಂಥ ಕಾದ ಕಬ್ಬಿಣವನ್ನು ಬೇರೊಂದು ಸ್ಥಾವರಕ್ಕೆ ಸುರಿಯುವ ಸಮಯದಲ್ಲಿ ಭದ್ರಾವತಿಯಲ್ಲಿ ಇದೊಂದು ಅವಘಡ ನಿರ್ಮಾಣವಾಗಿದೆ. ಬಹಳ ದೊಡ್ಡ ಸ್ಫೋಟ ಉಂಟಾಗಿ ಸುಮಾರು 7 ಜನ ಕಾರ್ಮಿಕರು ಸುಟ್ಟು ಕರಕಲಾಗಿದ್ದಾರೆ. ಸತ್ತು